## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 140/2014 ಪಿ.ಡಬ್ಲ್ಯೂಃ 8

ಸಿಡಬ್ಲೂಃ 10

| | | |
|---|---|---|
| ಸಾಕ್ಷಿದಾರರ ಹೆಸರು | : | ಗಜಾನನ |
| ತಂದೆಯ ಹೆಸರು | : | ಮಹಾಬಳೇಶ್ವರ ಸಾಳುಂಕೆ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ್ತವ್ಯ | : | ಅಸ್ನೋಟಿ , ಕಾರವಾರ |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 06-01-2023

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಚಾಸಾ.1 ರವರು ನನ್ನ ಅಣ್ಣನ ಹೆಂಡತಿ . ಚಾಸಾ.7 ನನ್ನ ಅಣ್ಣ. ಚಾಸಾ.8 ನನ್ನ ಅಣ್ಣನ ಮಗ. ದಿನಾಂಕಃ 27.03.2008 ರಂದು ನನ್ನ ಅಣ್ಣನ ಮನೆಯಲ್ಲಿ ಕಳ್ಳತನ ಆಗಿರುತ್ತದೆ. ನನ್ನ ಅಣ್ಣನ ಮನೆ ಸದಾಶಿವಗಡದ ದೇಸಾಯಿವಾಡಾದಲ್ಲಿ ಇರುತ್ತದೆ. ಕಳ್ಳತನದ ಬಗ್ಗೆ ನನಗೆ ತಿಳಿಸಲು ಚಾಸಾ.7 ರವರು ನನಗೆ ಕರೆ ಮಾಡಿದರು. ನಾನು ಆಗ ನನ್ನ ಅಣ್ಣನ ಮನೆಗೆ ಹೋದೆನು. ನಾನು ಹೋಗುವಷ್ಟರಲ್ಲಿ ಪೋಲೀಸರು ಅಲ್ಲಿ ಹಾಜರಿದ್ದು ಪಂಚನಾಮೆಯನ್ನು ಬರೆಯುತ್ತಿದ್ದರು. ನಾನು ಪಂಚನಾಮೆಗೆ ಸಹಿ ಮಾಡಿದೆ. ಮನೆಯ ಕೋಣೆಯಲ್ಲಿದ್ದ ಕಪಾಟು ತೆರೆದು ಅದರಲ್ಲಿರುವ ಬಟ್ಟೆಗಳೆಲ್ಲಾ ಚೆಲ್ಲಾಪಿಲ್ಲಿ ಆಗಿತ್ತು. ನಾನು ಅಣ್ಣನ ಮನೆಗೆ ಹೋದಾಗ ಮಧ್ಯಾಹ್ನ ಸುಮಾರು 2 ಗಂಟೆ ಅಗಿತ್ತು. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲಾ.

**( ಎಪಿಪಿ ಯವರು ಸಾಕ್ಷಿಯಿನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ , ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ . ಅನುಮತಿ ನೀಡಲಾಯಿತು )**

**ಪಾಟೀ ಸವಾಲುಃ ಎ ಪಿ ಪಿ ಯವರಿಂದಃ**

2. ನನ್ನ ಅಣ್ಣನ ಮನೆಯಲ್ಲಿ 2 ನೇ ಬೆಡ್ ರೂಮಿನಲ್ಲಿದ್ದ ಅಲ್ಮೇರಾದ ಒಳಗಡೆ ಇರುವ ಸ್ಪೆಷಲ್ ಲಾಕರನಲ್ಲಿ ಇಟ್ಟಿದ್ದ ಬಂಗಾರದ ಒಡವೆಗಳಾದ ಬಂಗಾರದ ಕರಿಮಣಿ ಬಳೆ -ಎರಡು , (2) ಬಂಗಾರದ ಪೊಳ್ಳು ಬಳೆ - ಎರಡು , (3) ಬಂಗಾರದ ನೆಕ್ಲೇಸ - ಒಂದು , (4) ಬಂಗಾರದ ಮುಷ್ಠಿ ಚೈನ - 1, (5)

ಬಂಗಾರದ ಉಂಗುರ – ಎರಡು , (6) ಬಂಗಾರದ ಕುಡುಕು ಜೊತೆ ಎರಡು ಒಟ್ಟು 131.2 ತೊಲೆ ಬಂಗಾರದ ಒಡವೆಗಳು ಮತ್ತು ನಗದು ಹಣ 500/– ರೂ. ನೋಟು 7 , 100/– ರೂ. ನೋಟು 10, 50/– ರೂ. ನೋಟು 100, ಒಟ್ಟು 9,500/– ಕಳ್ಳತನ ಆಗಿದ್ದರ ಬಗ್ಗೆ ಚಾಸಾ.7 ರವರು ನನಗೆ ಹೇಳಿರುತ್ತಾರೆ ಎಂದರೆ ಸರಿ. ಚಾಸಾ.7 ರವರು ನನಗೆ ಕಳ್ಳತನ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2.00 ಗಂಟೆಯ ಅವಧಿಯ ಮಧ್ಯದಲ್ಲಿ ಯಾರೋ ಕಳ್ಳತನ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಚಾಸಾ.7 ರವರು ನನಗೆ ಮನೆಯ ಮುಂದಿನ ಬಾಗಿಲಿನ ಚಿಲಕದ ಕೊಂಡಿಯನ್ನು ಕತ್ತರಿಸಿ ಮನೆಯೊಳಗೆ ಪ್ರವೇಶಿಸಿ ಕಳ್ಳತನ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಈ ಕುರಿತು ನಾನು ಪೋಲೀಸರಿಗೆ ದಿನಾಂಕಃ 27.03.2008 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

3. ದಿನಾಂಕಃ 02.12.2008 ರಂದು ಚಾಸಾ.7 ರವರ ಮನೆಯಲ್ಲಿ ಕಳ್ಳತನ ಆಗಿದ್ದ ಬಂಗಾರದ ಒಡವೆ ಮತ್ತು ಹಣವನ್ನು ಪೋಲೀಸರು ವಶಪಡಿಸಿಕೊಂಡಿದ್ದು ಅವುಗಳನ್ನು ನೋಡಲು ನಮಗೆ ಚಿತ್ತಾಕುಲಾ ಪೋಲೀಸ ಠಾಣೆಗೆ ಕರೆದಿರುತ್ತಾರೆ ಎಂದರೆ ಸರಿ. ಬಂಗಾರದ ನೆಕ್ಲೆಸ, ಬಂಗಾರದ ಉಂಗುರ , ಬಂಗಾರದ ಕಿವಿಯ ಕುಡುಕು, ಮತ್ತು ಬಂಗಾರದ ಕಿವಿಯ ಸಾದಾ ಕುಡುಕು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯ ಹೆಸರು ನನಗೆ ನೆನಪಿಲ್ಲಾ. ನಾನು ಅದೇ ದಿವಸ ಪೋಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎಂ ಬಿ ಎನ್ ವಕೀಲರಿಂದ ಆರೋಪಿ ಪರವಾಗಿಃ**

4. ನಾನು ಪೋಲೀಸರ ಮುಂದೆ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲಾ ಎಂದರೆ ಸರಿ. ಯಾವ ಬಂಗಾರದ ಒಡವೆಗಳು ಕಳ್ಳತನವಾಗಿರುತ್ತವೆ ಎಂದು ಹೇಳಲು ಆಗುವುದಿಲ್ಲಾ. ಯಾವ ಮುಖ ಬೆಲೆಯ ಎಷ್ಟು ನೋಟುಗಳು ಕಳ್ಳತನ ಆಗಿರುತ್ತದೆ ಎಂದು ಹೇಳಲು ಅಗುವುದಿಲ್ಲಾ. ನಾನು ಪೋಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಚಾಸಾ.1, ಚಾಸಾ.7 ಮತ್ತು 8 ರವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**